All India Radio: Bangalore
National Bulletin In Kannada
24.06.2026 7.35 am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<>><><*><><<>

ಮುಖ್ಯಾಂಶಗಳು

೧. ನವದೆಹಲಿಯಲ್ಲಿ ೧೬ನೇ ಬ್ರಿಕ್ಸ್ ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆ ಸಂಪನ್ನ; ಜಾಗತಿಕ ಭದ್ರತಾ ಸವಾಲುಗಳನ್ನು ಎದುರಿಸಲು ಹೆಚ್ಚಿನ ಸಹಕಾರಕ್ಕೆ ಕರೆ

೨. ಕಳೆದ ತ್ರೈಮಾಸಿಕದಲ್ಲಿ ಭಾರತದ ಒಟ್ಟು ವ್ಯಾಪಾರ ವಹಿವಾಟು ಶೇಕಡಾ ೫.೪ ರಷ್ಟು ಪ್ರಗತಿ

೩. ಹಾರ್ಮುಜ್ ಜಲಸಂಧಿಯಿಂದ ೧೧ ಸಾವಿರಕ್ಕೂ ಹೆಚ್ಚು ನಾವಿಕರ ಸ್ಥಳಾಂತರಕ್ಕೆ ಅಂತಾರಾಷ್ಟ್ರೀಯ ಕಡಲ ಸಂಸ್ಥೆ ಯೋಜನೆ

೪. ಎಮ್‌ಎಸ್‌ಎಮ್‌ಇ ಗಳಿಗೆ ಹಣಕಾಸು ಸೌಲಭ್ಯ ಸುಲಭಗೊಳಿಸಲು ಟ್ರೆಡ್ಸ್ ಅಂತಿಮ ಮಾರ್ಗಸೂಚಿ ಪ್ರಕಟಿಸಿದ ಆರ್‌ಬಿಐ

೫. ಫಿಫಾ ವಿಶ್ವಕಪ್ ಫುಟ್ಬಾಲ್; ಉಜ್ಬೇಕಿಸ್ತಾನದ ವಿರುದ್ಧ ಪೋರ್ಚುಗಲ್‌ಗೆ ೫-೦ ಗೋಲುಗಳ ಭರ್ಜರಿ ಜಯ

<>><><*><><<>

ಭಾರತದ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ನಡೆದ ೧೬ನೇ ಬ್ರಿಕ್ಸ್ ರಾಷ್ಟ್ರೀಯ ಭದ್ರತಾ ಸಲಹೆಗಾರರ ಉನ್ನತ ಮಟ್ಟದ ಸಭೆಯಲ್ಲಿ, ಭಯೋತ್ಪಾದನೆ ಮತ್ತು ಸೈಬರ್ ಬೆದರಿಕೆಗಳು ಸೇರಿದಂತೆ ವ್ಯಾಪಕ ಜಾಗತಿಕ ಭದ್ರತಾ ಸವಾಲುಗಳನ್ನು ಎದುರಿಸಲು ಬಲವಾದ ಸಹಕಾರವನ್ನು ನೀಡುವಂತೆ ಸದಸ್ಯ ರಾಷ್ಟ್ರಗಳು ಕರೆ ನೀಡಿವೆ. ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರ ನೇತೃತ್ವದಲ್ಲಿ ನಡೆದ ಈ ಸಭೆಯಲ್ಲಿ, ಅಂತಾರಾಷ್ಟ್ರೀಯ ಸಮುದಾಯವು ಎದುರಿಸುತ್ತಿರುವ ಸಾಂಪ್ರದಾಯಿಕ ಮತ್ತು ಉದಯೋನ್ಮುಖ ಬೆದರಿಕೆಗಳ ಕುರಿತು ಚರ್ಚಿಸಲಾಯಿತು. ಗಡಿಗಳನ್ನು ಮೀರಿ ಬೆಳೆಯುತ್ತಿರುವ ಭದ್ರತಾ ಅಪಾಯಗಳ ಮೇಲೆ ಸಭೆಯು ಪ್ರಮುಖವಾಗಿ ಗಮನ ಹರಿಸಿತು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಇಂಧನ ಮತ್ತು ಆಹಾರ ಭದ್ರತೆಯಿಂದ ಹಿಡಿದು ಹವಾಮಾನ ವೈಪರೀತ್ಯ ಹಾಗೂ ಭಯೋತ್ಪಾದಕ ಸಂಘಟನೆಗಳು ಹೊಸ ತಂತ್ರಜ್ಞಾನಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ವಿಷಯಗಳ ಬಗ್ಗೆ ಪ್ರತಿನಿಧಿಗಳು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಮೇ ಮತ್ತು ಜೂನ್ ತಿಂಗಳಿನಲ್ಲಿ ನಡೆದಿದ್ದ ಭಯೋತ್ಪಾದನೆ ನಿರೋಧಕ ಹಾಗೂ ಮಾಹಿತಿ ತಂತ್ರಜ್ಞಾನ ಬಳಕೆ ಭದ್ರತೆಗೆ ಸಂಬಂಧಿಸಿದ ಬ್ರಿಕ್ಸ್ ಜಂಟಿ ಕಾರ್ಯಕಾರಿ ತಂಡಗಳ ಸಭೆಯ ಫಲಿತಾಂಶಗಳನ್ನು ಇದೇ ವೇಳೆ ಪರಿಶೀಲಿಸಲಾಯಿತು.  ಭದ್ರತಾ ಸಾಮರ್ಥ್ಯ ವೃದ್ಧಿ, ಮಾಹಿತಿ ಹಂಚಿಕೆ ಮತ್ತು ಕಾನೂನು ಜಾರಿ ಸಂಸ್ಥೆಗಳ ನಡುವಿನ ಸಮನ್ವಯದ ಮೂಲಕ ಭಯೋತ್ಪಾದನೆ ಹಾಗೂ ಸೈಬರ್ ಅಪಾಯಗಳನ್ನು ಸಾಮೂಹಿಕವಾಗಿ ಹತ್ತಿಕ್ಕಲು ನಾಯಕರು ಬೆಂಬಲ ಸೂಚಿಸಿದರು. ಸದೃಢತೆ, ನಾವೀನ್ಯತೆ, ಸಹಕಾರ ಮತ್ತು ಸುಸ್ಥಿರತೆಗಾಗಿ ನಿರ್ಮಾಣ ಎಂಬ ಶೀರ್ಷಿಕೆಯಡಿ ೨೦೨೬ ರಲ್ಲಿ ಭಾರತ ವಹಿಸಿಕೊಂಡಿರುವ ಬ್ರಿಕ್ಸ್ ಅಧ್ಯಕ್ಷತೆಗೆ ಎಲ್ಲಾ ರಾಷ್ಟ್ರಗಳ ಭದ್ರತಾ ಸಲಹೆಗಾರರು ಪೂರ್ಣ ಬೆಂಬಲ ವ್ಯಕ್ತಪಡಿಸಿದರು. ಸಭೆ ಸಂಪನ್ನಗೊಂಡ ನಂತರ, ನಿಯೋಗದ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದರು.

<>><><*><><<>

ಸದೃಢ ಆರ್ಥಿಕತೆ, ಸುಸ್ಥಿರ ಅಭಿವೃದ್ಧಿ ಮತ್ತು ಅಂತರ್ಗತ ಬೆಳವಣಿಗೆಗಾಗಿ ಬಲವಾದ ಬಹುಪಕ್ಷೀಯ ಸಹಕಾರ ಅಗತ್ಯ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ’ಬೆಳವಣಿಗೆಗಾಗಿ ಜಾಗತಿಕ ಸಂಗಮ’ ಶೃಂಗಸಭೆಯನ್ನುದ್ದೇಶಿಸಿ ವರ್ಚುವಲ್ ಮೂಲಕ ಮಾತನಾಡಿದ ಅವರು, ಜಾಗತಿಕ ಸಂಘರ್ಷ ಹಾಗೂ ಅನಿಶ್ಚಿತತೆಯ ಪರಿಣಾಮಗಳು, ಅಭಿವೃದ್ಧಿಶೀಲ ರಾಷ್ಟ್ರಗಳು ಮತ್ತು ಜಾಗತಿಕ ದಕ್ಷಿಣ ರಾಷ್ಟ್ರಗಳ ಮೇಲೆ ಅಸಮ ಪ್ರಮಾಣದಲ್ಲಿ ಬೀಳುತ್ತಿದ್ದು, ಇದನ್ನು ಎದುರಿಸಲು ಸಂಘಟಿತ ಜಾಗತಿಕ ಕ್ರಮ ಅನಿವಾರ್ಯವಾಗಿದೆ ಎಂದರು. ಭಾರತದ ಆರ್ಥಿಕ ಪ್ರಗತಿ ಉಲ್ಲೇಖಿಸಿದ ಸಚಿವರು, ದೇಶದ ಬೆಳವಣಿಗೆಯು ಪ್ರಮುಖವಾಗಿ ದೇಶೀಯ ಬೇಡಿಕೆಯಿಂದ ಪ್ರೇರಿತವಾಗಿದೆ. ಭಾರತ, ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದಾಗಿದ್ದು, ಮಧ್ಯಮ ಅವಧಿಯಲ್ಲಿ ಜಿಡಿಪಿ ಬೆಳವಣಿಗೆಯು ಶೇಕಡಾ ಏಳರ ಆಸುಪಾಸಿನಲ್ಲಿ ಭದ್ರವಾಗಿರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.  ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರಾನ್ ಅಧ್ಯಕ್ಷತೆಯಲ್ಲಿ ನಡೆದ ಈ ಶೃಂಗಸಭೆಯಲ್ಲಿ ಜಿ೭ ರಾಷ್ಟ್ರಗಳು ಹಾಗೂ ಅಂತಾರಾಷ್ಟ್ರೀಯ ಹಣಕಾಸು ನಿಧಿ-ಐಎಂಎಫ್ ಪ್ರತಿನಿಧಿಗಳು ಭಾಗವಹಿಸಿದ್ದರು.

<>><><*><><<>

ಕಳೆದ ತ್ರೈಮಾಸಿಕದಲ್ಲಿ ಭಾರತದ ಒಟ್ಟು ವ್ಯಾಪಾರ ವಹಿವಾಟು ಶೇಕಡಾ ೫.೪ ರಷ್ಟು ಪ್ರಗತಿ ಸಾಧಿಸಿದೆ ಎಂದು ನೀತಿ ಆಯೋಗದ ಉಪಾಧ್ಯಕ್ಷ ಡಾ.ಅಶೋಕ್ ಕುಮಾರ್ ಲಾಹಿರಿ ತಿಳಿಸಿದ್ದಾರೆ. ನವದೆಹಲಿಯಲ್ಲಿಂದು 'ಟ್ರೇಡ್ ವಾಚ್ ಕ್ವಾರ್ಟರ್ಲಿ' ವರದಿಯ ಇತ್ತೀಚಿನ ಆವೃತ್ತಿಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಕಳೆದ ತ್ರೈಮಾಸಿಕದಲ್ಲಿ ಭಾರತದ ರಫ್ತು ಪ್ರಮಾಣವು ೧.೮೪ ಟ್ರಿಲಿಯನ್ ಡಾಲರ್ ತಲುಪಿದ್ದು, ಆಮದು ಪ್ರಮಾಣವು ಶೇಕಡಾ ೬.೫ ರಷ್ಟು ಹೆಚ್ಚಳವಾಗಿದೆ ಎಂದು ವಿವರ ನೀಡಿದರು. ಪಶ್ಚಿಮ ಏಷ್ಯಾದ ಪ್ರಸಕ್ತ ಬಿಕ್ಕಟ್ಟಿನ ಕುರಿತು ಪ್ರಸ್ತಾಪಿಸಿದ ಅವರು, ಈ ಪರಿಸ್ಥಿತಿಯು ತಾತ್ಕಾಲಿಕವಾಗಿದ್ದು, ಶೀಘ್ರದಲ್ಲೇ ಜಗತ್ತಿನಲ್ಲಿ ಶಾಂತಿ ನೆಲೆಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

<>><><*><><<>

ಹಾರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ೧೧ ಸಾವಿರಕ್ಕೂ ಹೆಚ್ಚು ನಾವಿಕರನ್ನು ಸುರಕ್ಷಿತವಾಗಿ ಸ್ಥಳಾಂತರಿಸುವ ಯೋಜನೆಯನ್ನು ಅಂತಾರಾಷ್ಟ್ರೀಯ ಕಡಲ ಸಂಸ್ಥೆ-ಐಎಂಒ ಪ್ರಕಟಿಸಿದೆ. ಈ ಕಾರ್ಯಾಚರಣೆಗೆ ಅಗತ್ಯವಿರುವ ಭದ್ರತೆಯನ್ನು ಖಚಿತಪಡಿಸಿಕೊಳ್ಳಲಾಗಿದ್ದು, ಅಮೆರಿಕ ಹಾಗೂ ಇರಾನ್ ನಡುವಿನ ತಿಳುವಳಿಕಾ ಪತ್ರದ ಅನ್ವಯ ಇರಾನ್, ಒಮಾನ್ ಸೇರಿದಂತೆ ಪ್ರಾದೇಶಿಕ ರಾಷ್ಟ್ರಗಳ ಸಹಕಾರದೊಂದಿಗೆ ತೆರವು ಪ್ರಕ್ರಿಯೆ ನಡೆಯಲಿದೆ ಎಂದು ಐಎಂಒ ಪ್ರಧಾನ ಕಾರ್ಯದರ್ಶಿ ಆರ್ಸೆನಿಯೊ ಡೊಮಿಂಗ್ವೇಸ್ ತಿಳಿಸಿದ್ದಾರೆ. ಇದೇ ವೇಳೆ, ಜಿನೆವಾದ ವಿಶ್ವಸಂಸ್ಥೆ ಕಚೇರಿಯ ಇರಾನ್ ರಾಯಭಾರಿ ಅಲಿ ಬಹರೇನಿ ಅವರು ಮಾತನಾಡಿ, ವಾಣಿಜ್ಯ ಹಡಗುಗಳ ಸಂಚಾರಕ್ಕಾಗಿ ಹಾರ್ಮುಜ್ ಜಲಸಂಧಿಯನ್ನು ಯಾವುದೇ ಸುಂಕವಿಲ್ಲದೆ ಸಂಪೂರ್ಣವಾಗಿ ಮುಕ್ತಗೊಳಿಸಲಾಗಿದೆ ಎಂದಿದ್ದಾರೆ. ಅಮೆರಿಕ-ಇರಾನ್ ನಡುವಿನ ಮಾತುಕತೆಗಳ ಆಧಾರದ ಮೇಲೆ ೬೦ ದಿನಗಳ ನಂತರ ಪ್ರಸಕ್ತ ಪರಿಸ್ಥಿತಿಯನ್ನು ಮರುಪರಿಶೀಲಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

<>><><*><><<>

ಭಾರತೀಯ ರಿಸರ್ವ್ ಬ್ಯಾಂಕ್- ಆರ್‌ಬಿಐ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ-ಎಂಎಸ್‌ಎಂಇ ಗಳ ಮಾರಾಟಗಾರರ ನೋಂದಣಿ ಪ್ರಕ್ರಿಯೆಯನ್ನು ಸರಳಗೊಳಿಸುವ ಹಾಗೂ ಹಣಕಾಸು ಪೂರೈಕೆದಾರರಿಗೆ ಸಾಲ ಖಾತರಿಯ ಸೌಲಭ್ಯ ಒದಗಿಸುವ ಉದ್ದೇಶದಿಂದ ಟ್ರೇಡ್ ರಿಸೀವೆಬಲ್ಸ್ ಡಿಸ್ಕೌಂಟಿಂಗ್ ಸಿಸ್ಟಂ- ಟ್ರೆಡ್ಸ್ ಕುರಿತ ಅಂತಿಮ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಟ್ರೆಡ್ಸ್ ಒಂದು ಆನ್‌ಲೈನ್ ವೇದಿಕೆಯಾಗಿದ್ದು, ಸಣ್ಣ ಉದ್ಯಮಗಳು ತಮ್ಮ ಬಾಕಿ ಇರುವ ಬಿಲ್‌ಗಳು ಅಥವಾ ವ್ಯಾಪಾರ ಪಡೆಯಬೇಕಾದ ಮೊತ್ತಗಳನ್ನು ಬ್ಯಾಂಕ್‌ಗಳು ಹಾಗೂ ಇತರೆ ಹಣಕಾಸು ಸಂಸ್ಥೆಗಳ ಮೂಲಕ ಹರಾಜು ಹಾಕಿ ಕಾರ್ಯಾಚರಣಾ ಬಂಡವಾಳವನ್ನು ಪಡೆದುಕೊಳ್ಳಲು ನೆರವಾಗುತ್ತದೆ. ನಿನ್ನೆ ಹೊರಡಿಸಿದ ನಿರ್ದೇಶನದಲ್ಲಿ, ಟ್ರೆಡ್ಸ್‌ಗೆ ಸಂಬಂಧಿಸಿದ ಪ್ರಸ್ತುತ ಸೂಚನೆಗಳನ್ನು ಸಮಗ್ರವಾಗಿ ಪರಿಶೀಲಿಸಿರುವುದಾಗಿ ಆರ್‌ಬಿಐ ತಿಳಿಸಿದ್ದು, ಅವುಗಳನ್ನು ಒಂದೇ ಚೌಕಟ್ಟಿನಡಿ ಏಕೀಕರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದೆ. ಟ್ರೆಡ್ಸ್ ನಿರ್ವಹಣಾ ಸಂಸ್ಥೆಗಳ ಕನಿಷ್ಠ ನಿವ್ವಳ ಮೌಲ್ಯದ ಅಗತ್ಯತೆಯನ್ನು ಇತರೆ ಬ್ಯಾಂಕೇತರ ಪಾವತಿ ವ್ಯವಸ್ಥೆ ನಿರ್ವಹಣಾ ಸಂಸ್ಥೆಗಳಿಗೆ ಅನ್ವಯವಾಗುವ ೨೫ ಕೋಟಿ ರೂಪಾಯಿಗಳ ಮಟ್ಟಕ್ಕೆ ಸಮನ್ವಯಗೊಳಿಸಲಾಗಿದೆ. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳು ಈ ಮಾನದಂಡವನ್ನು ೨೦೨೮ರ ಮಾರ್ಚ್ ೩೧ರೊಳಗೆ ಪೂರೈಸಬೇಕು ಎಂದು ಆರ್‌ಬಿಐ ತಿಳಿಸಿದೆ.

<>><><*><><<>

ಕತಾರ್‌ನ ರಾಸ್ ಲಫ್ಫಾನ್ ಕೈಗಾರಿಕಾ ನಗರದಲ್ಲಿ ಕಳೆದ ಭಾನುವಾರ ನಡೆದ ದುರಂತದಲ್ಲಿ ಭಾರತೀಯ ನಾಗರಿಕರು ಜೀವ ಕಳೆದುಕೊಂಡಿರುವುದಕ್ಕೆ ಕತಾರ್ ದೇಶದ ಅಮೀರ್ ಶೇಖ್ ತಮೀಮ್ ಬಿನ್ ಹಮದ್ ಅಲ್-ಥಾನಿ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರವಾಣಿ ಕರೆ ಮಾಡಿದ ಅವರು, ಘಟನೆಯಲ್ಲಿ ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದ್ದಾರೆ. ಬಾಧಿತ ಕುಟುಂಬಗಳಿಗೆ ಸಾಂತ್ವನ ಹೇಳಿದ ಕತಾರ್ ನಾಯಕರಿಗೆ ಪ್ರಧಾನಿ, ಧನ್ಯವಾದ ಅರ್ಪಿಸಿದ್ದು, ಗಾಯಾಳುಗಳಿಗೆ ಅಲ್ಲಿನ ಆಡಳಿತವು ಒದಗಿಸಿದ ತ್ವರಿತ ವೈದ್ಯಕೀಯ ನೆರವನ್ನು ಶ್ಲಾಘಿಸಿದ್ದಾರೆ. ಇದೇ ವೇಳೆ, ಉಭಯ ನಾಯಕರು ತಮ್ಮ ನಾಗರಿಕರ ಯೋಗಕ್ಷೇಮ ಮತ್ತು ಸುರಕ್ಷತೆಯನ್ನು ಖಾತ್ರಿಪಡಿಸುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದ್ದಲ್ಲದೆ, ಪರಸ್ಪರ ಬೆಂಬಲ ಮತ್ತು ಒಗ್ಗಟ್ಟನ್ನು ವ್ಯಕ್ತಪಡಿಸಿದ್ದಾರೆ.

<>><><*><><<>

ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಗಳ ಮೇಲೆ ದಾಳಿ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸರ್ವಾನುಮತದ ನಿರ್ಣಯ ಅಂಗೀಕರಿಸಿದೆ. ಇದರೊಂದಿಗೆ, ದಾಳಿಗೆ ತುತ್ತಾದ ಸೈನಿಕರು ಯಾವ ದೇಶಕ್ಕೆ ಸೇರಿದವರೋ, ಆಯಾ ದೇಶಗಳನ್ನು ತನಿಖೆಯಲ್ಲಿ ಭಾಗಿಯಾಗಿಸಿಕೊಳ್ಳುವುದನ್ನು ನಿರ್ಣಯವು ಬೆಂಬಲಿಸಿದೆ.

ಶಾಂತಿಪಾಲಕರು ಅಥವಾ ಅವರ ನೆಲೆಗಳ ಮೇಲಿನ ದಾಳಿಯು 'ಯುದ್ಧಾಪರಾಧ'ಕ್ಕೆ ಸಮಾನವಾಗಬಹುದು ಎಂದು ಪುನರುಚ್ಚರಿಸಿರುವ ಮಂಡಳಿಯು, ಸಂಘರ್ಷದಲ್ಲಿ ತೊಡಗಿರುವ ಎಲ್ಲಾ ಬಣಗಳು ವಿಶ್ವಸಂಸ್ಥೆಯ ಸಿಬ್ಬಂದಿ ವಿಷಯದಲ್ಲಿ ತಮ್ಮ ಜವಾಬ್ದಾರಿಗಳನ್ನು ಸಂಪೂರ್ಣವಾಗಿ ಪಾಲಿಸಬೇಕು ಎಂದು ಸೂಚಿಸಿದೆ. ಭಾರತ ಸೇರಿದಂತೆ ೧೫೦ ಕ್ಕೂ ಹೆಚ್ಚು ದೇಶಗಳು ಈ ನಿರ್ಣಯವನ್ನು ಜಂಟಿಯಾಗಿ ಪ್ರಾಯೋಜಿಸಿದ್ದು, ಇದು ಶಾಂತಿಪಾಲಕರ ಸುರಕ್ಷತೆಯ ಕುರಿತು ಅಂತಾರಾಷ್ಟ್ರೀಯ ಸಮುದಾಯಕ್ಕಿರುವ ಕಳಕಳಿಯನ್ನು ಪ್ರತಿಬಿಂಬಿಸುತ್ತದೆ.

<>><><*><><<>

ಎಥೆನಾಲ್ ಮಿಶ್ರಣ ಕಾರ್ಯಕ್ರಮವನ್ನು ವೈಜ್ಞಾನಿಕವಾಗಿ ಮೌಲ್ಯೀಕರಿಸಲಾಗಿದೆ ಮತ್ತು ನಿರಂತರವಾಗಿ ಮೇಲ್ವಿಚಾರಣೆ ಮಾಡಲಾಗುತ್ತದೆ ಎಂದು ಕೇಂದ್ರ ಸರ್ಕಾರ ಪುನರುಚ್ಚರಿಸಿದೆ. ಎಥೆನಾಲ್ ಮಿಶ್ರಿತ ಪೆಟ್ರೋಲ್ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಹರಡುತ್ತಿರುವ ಆಧಾರರಹಿತ ಹೇಳಿಕೆಗಳು ಸಾರ್ವಜನಿಕರನ್ನು ದಾರಿತಪ್ಪಿಸುವ ಗುರಿಯನ್ನು ಹೊಂದಿವೆ ಎಂದು ಕೇಂದ್ರ ಸರ್ಕಾರ ಗಮನಿಸಿದ್ದು, ಇ-೨೦ ಪೆಟ್ರೋಲ್ ಅನ್ನು ಪರಿಚಯಿಸಿದಾಗಿನಿಂದ, ಎಥೆನಾಲ್ ಮಿಶ್ರಣಕ್ಕೆ ಕಾರಣವಾದ ಎಂಜಿನ್ ವೈಫಲ್ಯ ಅಥವಾ ವಾಹನ ಸ್ಥಗಿತದ ಯಾವುದೇ ವ್ಯಾಪಕ ಸಮಸ್ಯೆಗಳು ವರದಿಯಾಗಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

<>><><*><><<>

ಅಮೆರಿಕದ ಹ್ಯೂಸ್ಟನ್‌ನಲ್ಲಿ ನಡೆದ ೨೦೨೬ ರ ಫಿಫಾ ವಿಶ್ವಕಪ್ ಫುಟ್ಬಾಲ್ ಪಂದ್ಯಾವಳಿಯ ಕೆ ಗುಂಪಿನ ಪಂದ್ಯದಲ್ಲಿ ಪೋರ್ಚುಗಲ್ ತಂಡ, ಉಜ್ಬೇಕಿಸ್ತಾನದ ವಿರುದ್ಧ ೫-೦ ಗೋಲುಗಳ ಭರ್ಜರಿ ಜಯ ಸಾಧಿಸಿದೆ. ತಾರಾ ಆಟಗಾರ ೪೧ ವರ್ಷದ ಕ್ರಿಸ್ಟಿಯಾನೊ ರೊನಾಲ್ಡೊ ಪೋರ್ಚುಗಲ್ ಪರ ಎರಡು ಗೋಲುಗಳನ್ನು ಗಳಿದರು. ರೊನಾಲ್ಡೊ ತಮ್ಮ ಗೋಲುಗಳೊಂದಿಗೆ ಆರು ವಿಭಿನ್ನ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಗೋಲು ಗಳಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಫಾಕ್ಸ್‌ಬರೋದ ಬೋಸ್ಟನ್ ಕ್ರೀಡಾಂಗಣದಲ್ಲಿ ಇಂಗ್ಲೆಂಡ್ ಮತ್ತು ಘಾನಾ ನಡುವಿನ ಎಲ್ ಗುಂಪಿನ ಪಂದ್ಯ ಯಾವುದೇ ಗೋಲುಗಳಿಲ್ಲದೆ ಡ್ರಾದಲ್ಲಿ ಕೊನೆಗೊಂಡಿತು.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>